ಸಾಕ್ಷಿಯನ್ನು ದಿನಾಂಕಃ 01.08.2024 ರಂದು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಎದುರುದಾರ ಪರ ವಕೀಲರಿಂದಃ-

ನನ್ನ ಪೂರ್ತಿ ಹೆಸರು ಪುಷ್ಪ ರಾಜು ಲಕ್ಕನ್ನವರ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣವನ್ನು ನನ್ನ ಗಂಡನ ಮೇಲೆ ಜೀವನಾಂಶಕ್ಕಾಗಿ ಹಾಕಿರುತ್ತೇನೆ. ಅರ್ಜಿಯನ್ನು ತಯಾರಿಸಲು ನಮ್ಮ ವಕೀಲರಿಗೆ ನಾನು ಮಾಹಿತಿ ಕೊಟ್ಟಿರುತ್ತೇನೆ. ಎದುರುದಾರರು ಸಲ್ಲಿಸಿರುವ ತಕರಾರುಗಳನ್ನು ನಮ್ಮ ವಕೀಲರು ನಮಗೆ ಓದಿ ಹೇಳಿರುವುದಿಲ್ಲ. ಎದುರುದಾರರು ಸಲ್ಲಿಸಿರುವ ತಕರಾರನ್ನು ಓದಿಸಿ ತಿಳಿದುಕೊಳ್ಳಲು ನನಗೆ ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸರಿ. ನಾವು ಹಾಕಿರುವ ಅರ್ಜಿಯು ಸುಳ್ಳಾಗಿರುತ್ತದೆ ಎಂದು ಎದುರುದಾರರು ಸಲ್ಲಿಸಿರುವ ತಕರಾರು ಸರಿ ಇರುತ್ತದೆ ಎಂದರೆ ಸಾಕ್ಷಿಯು ಮೊದಲು ಸರಿ ಎಂದು ನುಡಿದಿರುತ್ತಾರೆ. ನಂತರ ಸಾಕ್ಷಿಗೆ ನ್ಯಾಯಾಲಯವು ತಕರಾರು ಎಂದರೆ ಏನು ಗೊತ್ತಾ ಎಂದು ಕೇಳಿದಾಗ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ತಕರಾರಿನ ಅರ್ಥವನ್ನು ಹೇಳಿ ನಾವು ಹಾಕಿರುವ ಅರ್ಜಿಯು ಸುಳ್ಳಾಗಿರುತ್ತದೆ ಎಂದು ಎದುರುದಾರರು ಸಲ್ಲಿಸಿರುವ ತಕರಾರು ಸರಿ ಇರುತ್ತದೆ ಎಂದರೆ ಸರಿಯಲ್ಲ.

2) ನನ್ನ ಹಾಗೂ ಎದುರುದಾರನ ಮದುವೆಯು ದಿನಾಂಕ 20.06.2011 ರಂದು ಕೊಥಳಿ ಗ್ರಾಮದಲ್ಲಿ ಆಗಿರುತ್ತದೆ. ಮದುವೆ ಖರ್ಚನ್ನು ಎದುರುದಾರರೇ ಮಾಡಿರುತ್ತಾರೆಂದರೆ ಸಾಕ್ಷಿಯು ನಾವು ಮಾಡಿರುತ್ತೇವೆಂದು ನುಡಿಯುತ್ತಾರೆ. ಮದುವೆಗೆ ಒಂದು ಲಕ್ಷ ಹಣ ಯಾವ ರೀತಿ ಖರ್ಚು ಮಾಡಿರುತ್ತಿರಿ ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರ ಮಾಡಿರುತ್ತಿರಾ ಎಂದರೆ ಸಾಕ್ಷಿಯು ಬಂಗಾರ ಕೊಟ್ಟಿರುತ್ತೇವೆ, ಕಾಗದ ಪತ್ರಗಳು ಇಲ್ಲಾ, ಯಾದಿ ಪತ್ರವನ್ನು ಹಾಜರ ಮಾಡಿರುತ್ತೇವೆಂದು ನುಡಿಯುತ್ತಾರೆ. ಒಂದು ಲಕ್ಷ ಹಣವನ್ನು ಎದುರುದಾರರ ತಂದೆ ತಾಯಿ ಖರ್ಚು ಮಾಡಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ನಾವು ಖರ್ಚು ಮಾಡಿರುತ್ತೇವೆಂದು ನುಡಿಯುತ್ತಾರೆ.

3) ನನ್ನ ಮದುವೆಯಾದ ಒಂದು ತಿಂಗಳ ನಂತರ ಗಂಡನ ಮನೆಗೆ ಹೋಗಿರುತ್ತೇನೆ. ನಾನು ಗಂಡನ ಜೊತೆ ಅವರ ಮನೆಯಲ್ಲಿ ನಾಲ್ಕು ವರ್ಷ ಬಾಳ್ವೆ ಮಾಡಿರುತ್ತೇನೆ. ಸದರಿ ನಾಲ್ಕು ವರ್ಷದಲ್ಲಿ ಯಾವುದೇ ತಂಟೆ ತಕರಾರು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಅತ್ತೆ ನಾದಿನಿಯವರ ಕಾಟ ಇತ್ತು ಎಂದು ನುಡಿಯುತ್ತಾರೆ. ನಾನು ಹೇಳುವ ರಿತ್ಯ ಸದರಿ ನಾಲ್ಕು ವರ್ಷದಲ್ಲಿ ಆಗಿರುವ ಕಾಟಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪಂಚಾಯತಿ ಆಗಿರುತ್ತದೆಯಾ ಎಂದರೆ ಸಾಕ್ಷಿಯು ಊರಿನ ಪಂಚರು ಹೇಳಿರುತ್ತಾರೆ ಆದರೆ ಅವರು ತಮ್ಮ ನಡುವಳಿಕೆ

ಅರ್ಜಿಯಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಚಿಕ್ಕೋಡಿ ಆಸ್ಪತ್ರೆಯಲ್ಲಿ ದಾಖಲ ಆಗಿದ್ದೆ ಎಂದು ನುಡಿಯುತ್ತಾರೆ. ನನಗೆ ಮುರ್ಚೆ ರೋಗ ಇರುವ ಕಾರಣ ಕೆಳಗೆ ಬಿದ್ದಿರುತ್ತೇನೆ ಆಗ ಹಲ್ಲು ಮುರಿದಿರುತ್ತದೆ ಅದರ ಫಾಯ್ದೆ ತಗೊಂಡು ನಾನು ಎದುರುದಾರ ಮತ್ತು ಅವರ ಕುಟುಂಬದ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ.

8) ನನ್ನ ಅರ್ಜಿಯಲ್ಲಿ ನಮೂದು ಮಾಡಿರುವ ರಿತ್ಯ ಯಾವುದೇ ಘಟನೆ ಆಗದಿದ್ದರೂ ಸಹ ನಾನು ಸುಳ್ಳು ಹೇಳಿ ಅರ್ಜಿಯನ್ನು ಬರೆಸಿರುತ್ತೇನೆಂದರೆ ಸರಿಯಲ್ಲ. ನಾವು ಆರ್ಥಿಕವಾಗಿ ಚೆನ್ನಾಗಿರುತ್ತೇವೆಂದರೆ ಸರಿಯಲ್ಲ. ಈ ಅರ್ಜಿಯನ್ನು ಯಾವ ದಿನಾಂಕದಂದು ಹಾಕಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

9) ನಾನು ನನ್ನ ಗಂಡ ಒಕ್ಕಲುತನ ಮತ್ತು ಕೂಲಿ ಕೆಲಸ ಮಾಡುತ್ತಾನೆ ಎಂದು ಹೇಳಿರುತ್ತೇನೆಂದರೆ ಸರಿ. ನನ್ನ ಗಂಡನಿಗೆ 4 ಎಕರೆ ಜಮೀನು ಇರುತ್ತದೆ ಮತ್ತು ಬ್ಯಾಂಕನಲ್ಲಿ ನಾಲವತ್ತು ಲಕ್ಷ ಇರುತ್ತದೆ ಎಂದು ಮತ್ತು ನನ್ನ ಗಂಡನ ಆದಾಯವನ್ನು ತೋರಿಸಲು ನಾನು ನ್ಯಾಯಾಲ ಯಕ್ಕೆ ದಾಖಲೆಗಳನ್ನು ಹಾಜರ ಮಾಡಿರುತ್ತೇನೆ. ನನ್ನ ಗಂಡನ ಹತ್ತಿರ ಬ್ಯಾಂಕಿನಲ್ಲಿ ಹಣ ಠೇವಣಿ ಆಗದಿದ್ದರೂ ಸಹ ನಾನು ನಾಲವತ್ತು ಲಕ್ಷ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ಕಾಗದ ಹಾಜರ ಮಾಡದೇ ಮತ್ತು ಎದುರುದಾರನಿಗೆ ಯಾವುದೇ ಆದಾಯ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ತವರು ಮನೆಯಲ್ಲಿ ಖಾಲಿ ಇರುತ್ತೇನೆ. ನನ್ನನ್ನು ನನ್ನ ತಂದೆ ತಾಯಿ ಸಾಕುತ್ತಿದ್ದಾರೆ. ನನಗೆ ಕೆಲಸ ಮಾಡುವ ಸಾಮರ್ಥ ಇರುತ್ತದೆ ಎಂದರೆ ಸರಿಯಲ್ಲ. ತವರು ಮನೆಯಲ್ಲಿ ನಮಗೆ 5 ಎಕರೆ ನೀರಾವರಿ ಜಮೀನು ಇರುವುದರಿಂದ ನಾವು ಆರ್ಥಿಕವಾಗಿ ಚೆನ್ನಾಗಿ ಇರುವ ಕಾರಣ 2015 ರಿಂದ ಇಲ್ಲಿಯವರೆಗೆ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಬಡವರು ಇರುತ್ತೇವೆಂದು ನುಡಿಯುತ್ತಾರೆ. ನನ್ನ ಗಂಡನಿಗೆ ವಯಸ್ಸಾದ ಕಾರಣ ಯಾವಾಗಲಾದರೂ ಮಾತ್ರ ದುಡಿಯಲು ಹೋಗುತ್ತಾನೆ ಆತನ ಪರಿಸ್ಥಿತಿ ಸಹ ನಾಜೂಕು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನಿಗೆ ಹೊಲ, ಮನೆ ಇರುತ್ತದೆ ಮತ್ತು ಅವರು ಶ್ರೀಮಂತರ ಇರುತ್ತಾರೆಂದು ನುಡಿಯುತ್ತಾರೆ. ಎದುರುದಾರರಿಗೆ ಜೀವನಾಂಶ ಕೊಡುವ ಸಾಮರ್ಥ ಇಲ್ಲದಿದ್ದರೂ ಸಹ ಆತನಿಗೆ ತೊಂದರೆ ಕೊಡಬೇಕೆಂದು 2022 ರಲ್ಲಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬಂದಾಗ ಎದುರುದಾರನ ಜೊತೆ ಜಗಳ ಮಾಡುತ್ತೇನೆಂದರೆ ಸರಿಯಲ್ಲ. ಆತ ನನಗೆ ಹೆದರುತ್ತಾನೆಂದರೆ ಸರಿಯಲ್ಲ. ಎದುರುದಾರರು ಕೂಲಿ ಮತ್ತು ವ್ಯವಸಾಯ ಮಾಡುವಷ್ಟು ಬಲಿಷ್ಟ ನಾಗಿರುವುದಿಲ್ಲ ಮತ್ತು ಖಾಲಿ ಇರುತ್ತಾನೆಂದರೆ ಸರಿಯಲ್ಲ. ನಾನು ಹಾಜರ ಮಾಡಿರುವ ಎಲ್ಲಾ ದಾಖಲೆಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

PW.1.

ಬದಲಾಯಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ತಂಟೆ ತಕರಾರು ಯಾವ ರೂಪದಲ್ಲಿ ಆಗುತ್ತಿತ್ತು ಎಂದರೆ ಸಾಕ್ಷಿಯು ನನಗೆ ಅಡಿಗೆ ಮಾಡಲು ಬರುವುದಿಲ್ಲ, ನಾನು ಬಂಜೆ ಎಂದು ಮತ್ತು ತವರು ಮನೆಯಿಂದ ಐದು ಲಕ್ಷ ಹಣ, ಬೆಳ್ಳಿ ಬಂಗಾರ ತೆಗೆದುಕೊಂಡು ಬಾ ಎಂದು ಜಗಳ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಐದು ಲಕ್ಷ ಹಣ, ಬೆಳ್ಳಿ ಬಂಗಾರ ತೆಗೆದುಕೊಂಡು ಬಾ ಎಂದು ಜಗಳ ಮಾಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4) 2015 ರಿಂದ ನಾನು ನನ್ನ ತಂದೆ ತಾಯಿ ಮನೆಯಲ್ಲಿ ಇರುತ್ತೇನೆಂದರೆ ಸರಿ. ನನ್ನ ತವರು ಮನೆ ಹೆಬ್ಬಾಳ ಆಗಿರುತ್ತದೆ. 2015 ರಿಂದ ಇಲ್ಲಿಯವರೆಗೆ ಗಂಡನ ಜೊತೆ ಬಾಳ್ವೆ ಮಾಡುತ್ತೇನೆಂದು ಯಾವುದಾದರೂ ಪ್ರಕರಣ ದಾಖಲಿಸಿರುತ್ತೀರಾ ಅಥವಾ ನೋಟಿಸ ಕೊಟ್ಟಿರುತ್ತಿರಾ ಎಂದರೆ ಸಾಕ್ಷಿಯು ನೋಟಿಸ ಕೊಟ್ಟಿರುವುದಿಲ್ಲ, ಪ್ರಕರಣ ದಾಖಲಿಸಿರುವುದಿಲ್ಲ ಆದರೆ ಪಂಚಾಯತಿ ಕೂಡಿದ್ದೆ ಎಂದು ನುಡಿಯುತ್ತಾರೆ. ಪಂಚಾಯತಿಯು ಹೆಬ್ಬಾಳದಲ್ಲಿ ಆಗಿರುತ್ತದೆ. ಯಾವಾಗ ಪಂಚಾಯತಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಪಂಚಾಯತಿಯಲ್ಲಿ ವೀರುಪಾಕ್ಷಿ ಯರಗಾರ, ಆದಪ್ಪ ಅಪ್ಪಣ್ಣವರ ಮತ್ತು ದುಂಡಪ್ಪ ಶೆಟ್ಟೆನವರ ಇರುತ್ತಾರೆ. ಸದರಿ ಪಂಚಾಯತಿ ಬಗ್ಗೆ ಅರ್ಜಿಯಲ್ಲಿ ಬರೆಸಿರುತ್ತೇನೆ. ನನಗೆ ಮಕ್ಕಳಾಗಿರುವುದಿಲ್ಲ. ನಾನು ನನ್ನ ಗಂಡನ ಜೊತೆ ಸರಿಯಾಗಿ ಬಾಳ್ವೆ ಮಾಡದೇ ಇರುವ ಕಾರಣ ನನಗೆ ಮಕ್ಕಳಾಗಿರುವುದಿಲ್ಲ ಎಂದರೆ ಸರಿಯಲ್ಲ.

5) ನನ್ನ ತಲೆ ಸರಿ ಇರುವುದಿಲ್ಲ ಮತ್ತು ನನಗೆ ಮೇಲಿಂದ ಮೇಲೆ ಮುರ್ಚೆ ಬರುತ್ತದೆ ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ನನ್ನ ಗಂಡನ ಜೊತೆ ವ್ಯವಸ್ಥಿತವಾಗಿ ಬಾಳ್ವೆ ಮಾಡದೇ 2015 ರಿಂದ ಇಲ್ಲಿಯವರೆಗೆ ತವರು ಮನೆಯಲ್ಲಿ ಇರುತ್ತೇನೆಂದರೆ ಸಾಕ್ಷಿ ನನ್ನ ಗಂಡನ ನನ್ನನ್ನು ಹೊರ ಹಾಕಿರುತ್ತಾರೆಂದು ನುಡಿಯುತ್ತಾರೆ.

6) ನಾನು ನನ್ನ ತಂದೆ ತಾಯಿಯ ವ್ಯವಸ್ಥೆ ಮಾಡುವ ಸಲುವಾಗಿ ತವರು ಮನೆಯಲ್ಲಿ ಇರುತ್ತೇನೆಂದರೆ ಸಾಕ್ಷಿಯು ಎದುರುದಾರರು ನನ್ನನ್ನು ಕರೆದುಕೊಂಡು ಹೋಗದೇ ಇರುವ ಕಾರಣ ಇರುತ್ತೇನೆಂದು ನುಡಿಯುತಾತರೆ.

7) 2015 ರಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಿರಾ ಎಂದರೆ ಸಾಕ್ಷಿಯು ಚಿಕ್ಕೋಡಿಯಲ್ಲಿ ದಾಖಲಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ಪ್ರಕರಣ ಸಂಖ್ಯೆ 1199 ಆಗಿರುತ್ತದೆ. ಸದರಿ ಪ್ರಕರಣವನ್ನು ಗಂಡ, ಅತ್ತೆ, ಮೈದುನ, ನೆಗ್ಯಾನಿ ವಿರುದ್ಧ ಹಾಕಿರುತ್ತೇನೆ. ನಾನು ಹೊರಗೆ ಆದಾಗ ನನಗೆ ಬೆಳಗಿನಿಂದ ಊಟ ಕೊಟ್ಟಿರುವುದಿಲ್ಲ, ಆಗ ನಾನು ತಲೆ ಸುತ್ತಿ ಬಿದ್ದಿರುತ್ತೇನೆ ಮತ್ತು ನನಗೆ ಚೆಂಬಿನಿಂದ ಹೊಡೆದಿರುವ ಕಾರಣ ಹಲ್ಲುಗಳು ಮುರಿದಿರುತ್ತವೆ ಈ ಕಾರಣ ನಾನು ಆ ಪ್ರಕರಣ ದಾಖಲಿಸಿರುತ್ತೇನೆ. ಹಲ್ಲು ಮುರಿದ ಬಗ್ಗೆ ದೂರಿನಲ್ಲಿ ಅಥವಾ